# ಕಾಪಾಡು ದೇವರೇ ಅಹಂಕಾರದಿಂದ

ಕನಕದಾಸರ 'ಹರಿಭಕ್ತಿ ಸಾರ'ದಲ್ಲಿ 'ರಕ್ಷಿಸು ನಮ್ಮನನವರತ' ಎಂಬ ಸೊಲ್ಲು ಅನುರಣಿಸುತ್ತಿದೆ. ಇದೇ 'ಹರಿಭಕ್ತಿಸಾರ'ದ ಪಲ್ಲವಿ. ರಕ್ಷಿಸು– ನಮ್ಮನ್ನು ಕಾಪಾಡು– ಇದು ಪುರಾತನದಿಂದ, ನಾಗರಿಕತೆಯ ಆದಿಯಿಂದ ಬಂದ ಭಾವನೆ. ದೈವ ಕಾಪಾಡುತ್ತದೆ ಎಂಬ ಭಾವನೆಯ ಜೊತೆಗೇ ದೈವದ ಕಲ್ಪನೆ ಕುಡಿಯೊಡೆದಿರುವಂತಿದೆ ಅಥವಾ ದೈವದ ಕಲ್ಪನೆಯ ಜೊತೆಗೇ ಅದು ನಮ್ಮನ್ನು ಕಾಪಾಡುತ್ತದೆ ಎಂಬ ಭಾವನೆ.

ಕಾಪಾಡುವಿಕೆ ಎನ್ನುತ್ತೇವಲ್ಲ; ಕಾಪಾಡು ಎಂದು ಮೊರೆ ಇಡುತ್ತೇವಲ್ಲ, ಇದೊಂದು ನಮ್ಮ ದುರ್ಬಲತೆಯಿಂದ ಹುಟ್ಟಿಕೊಂಡ ಮಾತಿನಂತೆ ಕೇಳಿಸುತ್ತದೆ. ರೂಢಿಯ ಜಾಡಿಗೆ ಬಿದ್ದ ಹುಸಿಮಾತಿನಂತೆ ಕೇಳಿಸುತ್ತದೆ. ಆದರೆ ಕನಕದಾಸರಂಥ ಅನುಭಾವಿಗಳು ಈಮಾತು ಬಳಸುವಾಗ ಇದು ಬರಿಯ ರೂಢಿಯ ಮಾತಾಗಿರಲಾರದು. ಇದು ಆಳವಾದ ಮಾತಾಗಿರಬೇಕು!

ಹರಿಭಕ್ತಿಸಾರದ ಈ ಷಟ್ಪದಿಯನ್ನು ಕೇಳಿ:

'ಗೋಪುರದ ಭಾರವನು ನಾರೆಯ/ರೂಪುದೋರಿದ ಪ್ರತಿಮೆಯಂದದೊ/ ಳೀಪರಿಯ ಸಂಸಾರಭಾರವನಾಂತು ಶಿರದಲ್ಲಿ//

ತಾ ಪರಾಕ್ರಮಿ ಎಂದು ಮನುಜನು/ಕಾಪಥವನೈದುವನು ವಿಶ್ವ/ ವ್ಯಾಪಕನು ನೀನೆಲೆದೇವ ರಕ್ಷಿಸುನಮ್ಮನನವರತ//

ಕನಕದಾಸರು ಒಳನೋಟದಿಂದ ಮಾತನಾಡುತ್ತಿದ್ದಾರೆ. ಈ ಸಂಸಾರದ ಭಾರವನ್ನು ಈ ಲೋಕದ ಭಾರವನ್ನು ಹೊರುವವನು ತಾನು ಎಂದೇ ಮನುಜ ತಿಳಿದಿದ್ದಾನೆ. ಇದು ತಪ್ಪು ತಿಳುವಳಿಕೆ. ಬದುಕನ್ನು ನಡೆಯಿಸುವುದೆಂದರೆ ದೊಡ್ಡ ಭಾರವೊಂದನ್ನು ಹೊತ್ತು ಸಾಗಿದಂತೆ ಎಂದು ಭಾವಿಸುವುದೇ ಸರಿಯಾದ ತಿಳುವಳಿಕೆಯಲ್ಲ ಎನ್ನುತ್ತಿದ್ದಾರೆ.

ಇದಕ್ಕೊಂದು ದೃಷ್ಟಾಂತವನ್ನು ಕೊಡುತ್ತಿದ್ದಾರೆ.

ಒಂದು ದೇಗುಲವಿದೆ. ಆ ದೇಗುಲದ ಮುಂದೆ ದೊಡ್ಡ ಗೋಪುರವೊಂದನ್ನು ಕಟ್ಟಿ ನಿಲ್ಲಿಸಿದ್ದಾರೆ. ಆ ಗೋಪುರದ ಮೈಯಲ್ಲಿ ಚಿತ್ರವಿಚಿತ್ರವಾದ, ಕಲಾತ್ಮಕವಾದ ನಾನಾ ಪ್ರತಿಮೆಗಳನ್ನು ಕೆತ್ತಿದ್ದಾರೆ. ತಳದಲ್ಲಿರುವ ಒಂದು ಪ್ರತಿಮೆ– ಇದು ಮನುಷ್ಯನೊಬ್ಬನ ಪ್ರತಿಮೆ. ಈ ಪ್ರತಿಮೆ, ಇಡಿಯ ಗೋಪುರವನ್ನೆ ತನ್ನ ಕೈ–ಭುಜಗಳ ಮೇಲೆ ಹೊತ್ತುಕೊಂಡಿರುವಂತೆ ಕೆತ್ತಲ್ಪಟ್ಟಿದೆ. ಗೋಪುರದಲ್ಲಿಯೇ, ಗೋಪುರದ ಭಾಗವಾಗಿಯೇ, ಅದೇ ಗೋಪುರವನ್ನು ಹೊತ್ತುಕೊಂಡಿರುವಂತೆ ಕೆತ್ತಲಾಗಿರುವ ಪ್ರತಿಮೆ!

ಇದು ನಿಜಕ್ಕೂ ಮನುಷ್ಯನ ಸ್ಥಿತಿಗೇ ಒಂದು ಪ್ರತಿಮೆ ಅಂದರೆ ಪ್ರತೀಕವೇ ಆಗಿದೆ!

ಹೇಗೆಂದರೆ: ಗೋಪುರವನ್ನು ನಿಜಕ್ಕೂ ಹೊತ್ತದ್ದು ಯಾವುದು? ಯಾರು? ಈ ಭೂಮಿಯಲ್ಲವೆ? ನಮ್ಮೆಲ್ಲರನ್ನೂ ಹೊತ್ತುಕೊಂಡಿರುವ ಈ ಭೂಮಿಯೇ ಗೋಪುರವನ್ನು, ಏನೆಲ್ಲವನ್ನೂ ಹೊತ್ತುಕೊಂಡಿರುವುದಲ್ಲವೇ?

ಈ ಸರಳಸತ್ಯವೂ ಮನುಷ್ಯನಿಗೆ ತಿಳಿಯದೆ ಹೋಯಿತೇ? ಏನು ಕಾರಣದಿಂದ ತಿಳಿಯದೆ ಹೋಯಿತು?

ಏನು ಕಾರಣವೆಂದರೆ– ಗೋಪುರವನ್ನು ಹೊತ್ತಂತಿರುವ ಆ ಮನುಷ್ಯ ಪ್ರತಿಮೆಯ ಮುಖವನ್ನು ನೋಡಿ ಎನ್ನುತ್ತಾರೆ ದಾಸರು.

ಆ ಮುಖದಲ್ಲಿ ತಾನು ಗೋಪುರವನ್ನು ಹೊತ್ತವನು ಎನ್ನುವ ಅಹಂಕಾರ ಒಡೆದು ಕಾಣುತ್ತಿದೆ. 'ತಾ ಪರಾಕ್ರಮಿ' ಎಂದು!

ತಾನು ಯಾವ ಭಾರವನ್ನೂ ಹೊರಬಲ್ಲ ಪರಾಕ್ರಮಿ; ಗೋಪುರವನ್ನೇ ಹೊತ್ತುಕೊಂಡಿದ್ದೇನೆ; ಬೇಕಾದರೆ ಭೂಮ್ಯಾಕಾಶಗಳನ್ನೇ ಹೊರಬಲ್ಲೆ ಎಂದು ತನ್ನ ಅಹಂಕಾರವನ್ನೇ ಸಾರುವಂತಿದೆ ಪ್ರತಿಮೆಯ ಮುಖಭಾವ.

ಅಂದರೆ ಮನುಷ್ಯ ಹೊತ್ತಿರುವುದು ತನ್ನ ಅಹಂಕಾರವನ್ನು! ಅಹಂಕಾರದ ಗೋಪುರವನ್ನು! ಗೋಪುರದ ಭಾರಕ್ಕಿಂತಲೂ ಈ ಅಹಂಕಾರದ ಭಾರ ಹೆಚ್ಚೆನ್ನುವುದು ಇನ್ನೂ ಅವನಿಗೇ ತಿಳಿದಿಲ್ಲ. ಆದುದರಿಂದಲೇ ತನ್ನನ್ನು ಹೊತ್ತುಕೊಂಡಿರುವ ಈ ಭೂಮಿಯ ಮೇಲೆ ನಿಂತೇ ತಾನು ಗೋಪುರ ಹೊತ್ತವನು ಎನ್ನುತ್ತಿದ್ದಾನೆ. ಇದೊಂದು ವಿ–ಸಂಗತಿ. ವಿಪರ್ಯಾಸ. ತಲೆಕೆಳಗಾದ ಸಂಗತಿ. ತನ್ನ ಅನುಭವವನ್ನು ತಾನು ಶೋಧಿಸದೆ ಇರುವ ಸ್ಥಿತಿ. ಈ ಸ್ಥಿತಿಯಲ್ಲಿ; ನಮ್ಮನ್ನು ಕಾಪಾಡು ಎಂದು ದೇವರಲ್ಲಿ ಕೇಳಿಕೊಳ್ಳುವುದರ ಅರ್ಥ ನಮ್ಮ ಅಹಂಕಾರವನ್ನು ಕಾಪಾಡು ಎಂದೇ ಆಗುತ್ತದೆ.

ನಮ್ಮ ಅನುಭವವನ್ನು ಶೋಧಿಸುವಂತೆ ಮಾಡಬೇಡ, ಒಂದೊಮ್ಮೆ ನಮ್ಮ ಅನುಭವವು ಭ್ರಮಾತ್ಮಕವಾದರೆ ನಮಗೆ ನಮ್ಮ ಭ್ರಮೆಯೇ ಇರಲಿ; ಭ್ರಮೆಯನ್ನು ಹೊರಬಲ್ಲೆವು; ಭ್ರಮನಿರಸನದ ಸಂಕಟವನ್ನು ಹೊರಲಾರೆವು– ಎಂದಂತೆ ಆಗುತ್ತದೆ. ಇದೇ ರೂಢಿಜಡ ಸ್ಥಿತಿ.

ಕನಕದಾಸರು ಹೇಳುವ 'ರಕ್ಷಿಸು ನಮ್ಮನನವರತ' ಎಂಬ ಪಲ್ಲವಿಯಾದರೋ ಈ ರೂಢಿಜಡತೆಯಿಂದ ಗುಣಾತ್ಮಕವಾಗಿ ಬೇರೆಯಾದ್ದು. ಕನಕರ ಅರ್ಥವಿದು: 'ನೀನು' ರಕ್ಷಿಸುವವನು. ನಮ್ಮ ಅಹಂಕಾರ ನಮ್ಮನ್ನು ರಕ್ಷಿಸುತ್ತಿಲ್ಲ. ನಮ್ಮ ಅಹಂಕಾರದಿಂದಲೇ ನಮ್ಮನ್ನು ರಕ್ಷಿಸು. ಅದು ನೀನೇ ರಕ್ಷಿಸಬೇಕಷ್ಟೆ. ನೀನು ವಿಶ್ವ–ವ್ಯಾಪಕನಲ್ಲವೆ! ಎಲ್ಲೆಡೆ ಇದ್ದು, ಎಲ್ಲರೊಡನೆಯೂ ಇದ್ದು, ಎಲ್ಲವನ್ನೂ ಹೊತ್ತವನಲ್ಲವೆ?

ಭೂಮಿಯು ಗೋಪುರವನ್ನು ಹೊತ್ತದ್ದು ತಿಳಿದಾಗ ಹೇಗೆ 'ನಿರಾಳ'ವೋ ಹಾಗೆ ನೀನು ಎಲ್ಲದಕ್ಕೂ ಆಧಾರವಾಗಿರುವುದು ತಿಳಿದಾಗ– ಎಲ್ಲ ನಿರಾಳ! ಈ ಲೋಕದಲ್ಲಿ ಬೇರಾವುದರಿಂದಲೂ ಸಿಗದ ನಿರಾಳ! ಈ ನಿರಾಳತೆಯ ಕೊಡುಗೆಯೇ ನೀನೀಯುವ ರಕ್ಷಣೆ!

■ ತೋಷ

## ಮಾತೇ ಮುತ್ತು

★ ಭೂತಕಾಲದೊಂದಿಗೆ ಮಾತ್ರ ಬದುಕನ್ನು ಅರ್ಥ ಮಾಡಿಕೊಳ್ಳಬಹುದು. ಆದರೆ ಭವಿಷ್ಯದೊಂದಿಗೆ ಬದುಕಬೇಕು.

–ಸೋರೆನ್ ಕೀರ್ಕ್‌ಗಾರ್ಡ್

★ ತರ್ಕಭರಿತ ಮನಸ್ಸು ಎರಡು ಅಲಗಿನ ಕತ್ತಿಯಂತೆ. ಅದು ಬಳಸುವಾತನ ಕೈಯಲ್ಲೇ ರಕ್ತ ಭರಿಸುತ್ತದೆ.

–ರವೀಂದ್ರನಾಥ ಟ್ಯಾಗೋರ್

★ ಸುಳ್ಳಿನ ಜತೆಗೆ ಸಮಾಧಾನದಿಂದ ಇರುವುದರ ಬದಲು, ಸತ್ಯದಿಂದ ಗಾಯಗೊಳ್ಳುವುದು ಒಳ್ಳೆಯದು.

–ಖಾಲಿದ್ ಹುಸೇನಿ

★ ಮಕ್ಕಳಂತೆ ನಿಮ್ಮ ಮನಸ್ಸಿನ ಖುಷಿಗಾಗಿ ಓದಬೇಡಿ. ಮಹತ್ವಾಕಾಂಕ್ಷಿಗಳಂತೆ ಜನರಿಗೆ ಬುದ್ಧಿ ಹೇಳಲೂ ಓದಬೇಡಿ. ಬದುಕುವುದಕ್ಕಾಗಿ ಓದಿ.

–ಗುಸ್ತಾವ್ ಫ್ಲಾಬರ್ಟ್

★ ರಾಜ್ಯಗಳುದಿಸಲಿ ರಾಜ್ಯಗಳಳಿಯಲಿ,
ಹಾರಲಿ ಗದ್ದುಗೆ ಮಕುಟಗಳು,
ಮುತ್ತಿಗೆ ಹಾಕಲಿ ಸೈನಿಕರೆಲ್ಲ,
ಬಿತ್ತುಳುವುದನವ ಬಿಡುವುದೆ ಇಲ್ಲ.

–ಕುವೆಂಪು

★ ನಾನು ಪರಿಪೂರ್ಣ ಅಲ್ಲವೆಂದು ನನಗೆ ಗೊತ್ತಿದೆ. ಪರಿಪೂರ್ಣವಾಗಲೂ ನಾನು ಬಯಸುವುದಿಲ್ಲ. ಆದರೆ ನನ್ನೆಡೆಗೆ ಬೆರಳು ತೋರಿಸುವ ಮುನ್ನ ನಿನ್ನ ಕೈಗಳು ಸ್ವಚ್ಛ ಇವೆಯೆ ಎಂದು ನೋಡಿಕೊ.

–ಬಾಬ್ ಮಾರ್ಲೆ

★ ಸಹಜವಾಗಿ ಬದುಕುವುದಕ್ಕೆ ಜನರು ಇಷ್ಟೊಂದು ಶಕ್ತಿ ಏಕೆ ಖರ್ಚು ಮಾಡುತ್ತಾರೆ ಎನ್ನುವುದು ಅರ್ಥವೇ ಆಗುವುದಿಲ್ಲ.

–ಆಲ್ಬರ್ಟ್ ಕಾಮೂ

★ ದೇವಲೀಲೆಯೋ ಕಾಣೆ ಕರ್ಮಜಾಲವೋ ಕಾಣೆ
ಅದು ನಮ್ಮ ಬುದ್ಧಿಯಾಚೆಗಿನ ಮಾತು,
ಯಾವುದೇನೇ ಇರಲಿ ಪ್ರೀತಿಯಂಥಾ ವಸ್ತು
ಭವದಲ್ಲಿ ಕಾಣೆ ಮನಗಂಡ ಮಾತು.

–ಮಧುರ ಚೆನ್ನ

★ ಮಧ್ಯಮಮಟ್ಟದ ಶಿಕ್ಷಕ ಹೇಳಿಕೊಡುತ್ತಾನೆ. ಉತ್ತಮ ಶಿಕ್ಷಕ ವಿವರಿಸುತ್ತಾನೆ. ಮೇಲ್ಮಟ್ಟದ ಶಿಕ್ಷಕ ಪ್ರಾತ್ಯಕ್ಷಿಕೆ ಮಾಡುತ್ತಾನೆ. ಅತ್ಯುತ್ತಮ ಶಿಕ್ಷಕ ಸ್ಫೂರ್ತಿ ತುಂಬುತ್ತಾನೆ.

–ವಿಲಿಯಂ ಆರ್ಥರ್ ವಾರ್ಡ್

★ ಮರಳಿ ಪಡೆಯುವಂತಹದ್ದನ್ನು ನೀವು ಕೊಟ್ಟರೆ ಅದು ದಾನವಲ್ಲ. ಮರಳಿ ಪಡೆಯಲು ಸಾಧ್ಯವಾಗದಂತಹದ್ದನ್ನು ದಾನ ಮಾಡಿ.

–ಇದ್ರಿಸ್ ಶಾ